# ಪರ್ಯಾಯ ಶೈಕ್ಷಣಿಕ ಯೋಜನೆ: 2021–22

**ತರಗತಿ: 9** **ಮಾಹೆ : ನವೆಂಬರ್** **ವಿಷಯ : ಕನ್ನಡ – ದ್ವಿತೀಯ ಭಾಷೆ**

| ಕ್ರ.ಸಂ. | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ನವೆಂಬರ್–2021 ಮೊದಲನೇ ವಾರ | **ಗದ್ಯ – ಬಸ್ಸು ಪ್ರಯಾಣದ ಸುಖ ದುಃಖಗಳು**<br>ಲಲಿತ ಪ್ರಬಂಧ ಸಾಹಿತ್ಯ ಪ್ರಕಾರದ ಪರಿಚಯ ಮಾಡಿಕೊಳ್ಳುವುದು. | ಶಿಕ್ಷಕರು ಲಲಿತ ಪ್ರಬಂಧ ಸಾಹಿತ್ಯದ ಪ್ರಕಾರವನ್ನು ಪರಿಚಯಿಸುವುದು. ಸಮಾಜದ ಸ್ಥಿತಿಗತಿ, ಜನರ ಬದುಕು, ಶಿಕ್ಷಣ, ವಿಜ್ಞಾನ, ಕೃಷಿ, ನಂಬಿಕೆಗಳು ಮುತಾದವುಗಳನ್ನು ಮನಮುಟ್ಟುವಂತೆ ತಿಳಿ ಹಾಸ್ಯವನ್ನು ಬೆರೆಸಿ ಲಲಿತ ಪ್ರಬಂಧ ಸಾಹಿತ್ಯವನ್ನು ರಚಿಸಲಾಗಿರುತ್ತದೆ ಎಂದು ತಿಳಿಸುವರು. | ಪ್ರಬಂಧ ಸಾಹಿತ್ಯದ ಲಕ್ಷಣವನ್ನು ಪಟ್ಟಿ ಮಾಡಿರಿ. |
| | | ನೀಡಿದ ಪದಗಳನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯವನ್ನು ರಚಿಸುವುದು. | ಲೇಖಕರ ಸ್ಥಳ, ಕಾಲ ಮತ್ತು ಕೃತಿಗಳಿಗೆ ಸಂಬಂಧಿಸಿದ ಪದಗಳನ್ನು ನೀಡಿ ಅವುಗಳನ್ನು ಬಳಸಿಕೊಂಡು ವಾಕ್ಯಗಳ ರೂಪದಲ್ಲಿ ಲೇಖಕರ ಪರಿಚಯವನ್ನು ಬರೆಸುವುದು.<br><br>ಮಕ್ಕಳು ಮೌಖಿಕವಾಗಿಯೂ ಹೇಳಲು ಅವಕಾಶ ನೀಡುವುದು. | ವೀರೇಂದ್ರ ಸಿಂಪಿಯವರನ್ನು ವಾಕ್ಯರೂಪದಲ್ಲಿ ಪರಿಚಯಿಸಿ. |
| | | ಗದ್ಯಭಾಗವನ್ನು ಸೂಕ್ತ ಸ್ವರಭಾರಗಳೊಂದಿಗೆ ಓದುವರು ಮತ್ತು ಗದ್ಯವನ್ನು ಅರ್ಥೈಸಿಕೊಂಡು ತಮ್ಮದೇ ಆದ ಮಾತುಗಳಲ್ಲಿ ವಿವರಿಸುವರು. | ಶಿಕ್ಷಕರ ಮಾದರಿ ವಾಚನದ ನಂತರ ಮಕ್ಕಳು ಮೌನವಾಗಿ ಗದ್ಯವನ್ನು ಓದಿ ಅರ್ಥೈಸಿಕೊಂಡು ಲೇಖಕರ ಪ್ರವಾಸದ ಉದ್ದೇಶ, ಕ್ಷೇತ್ರಪ್ರವಾಸದ ಸಂದರ್ಭದಲ್ಲಿ ಅನುಭವಿಸಿದ ನವ್ಯತೆ, ಭವ್ಯತೆಗಳ ಸ್ವಾರಸ್ಯಕರ ಪ್ರಸಂಗವನ್ನು ತಮ್ಮದೇ ಧಾಟಿಯಲ್ಲಿ ವಿವರಿಸಿ ಸಾರಾಂಶವನ್ನು ಬರೆಯುವರು. | |

| | | | | |
|---|---|---|---|---|
| | | ಬಸ್ಸು ಪ್ರಯಾಣದ ಬಗ್ಗೆ ಲೇಖಕರ ಅನುಭವಗಳನ್ನು ಅರ್ಥ ಮಾಡಿಕೊಳ್ಳುವರು. | ಲೇಖಕರು ಬಸ್ಸು ಪ್ರಯಾಣದ ಸಂದರ್ಭದಲ್ಲಿ ಬಸ್ಸನ್ನು ಕಾಯುವುದು, ಬಸ್ಸು ಬಂದಾಗ ಹತ್ತಲು ನಡೆಸುವ ಸ್ಪರ್ಧೆ, ತಳ್ಳಾಟ, ನೂಕಾಟ, ಕಂಡಕ್ಟರ್ ಟಿಕೆಟ್ ನೀಡುವ ಪ್ರಸಂಗ ಸಹ ಪ್ರಯಾಣಿಕರ ನಡುವೆ ನಡೆಯುವ ಮಾತುಕತೆ, ಲಾರಿ ಪ್ರಯಾಣ ಮತ್ತು ಅದರ ಅನುಭವ, ಇವುಗಳನ್ನು ಶಿಕ್ಷಕರಿಂದ ಆಲಿಸಿ ಮಕ್ಕಳು ಪುನರಾವರ್ತಿಸುವರು. | ಲೇಖಕರಿಗೆ ಪ್ರವಾಸ ಎಂದರೆ ಸುಖ ಪ್ರಸಂಗ ಹೇಗೆ? ಕಾರಣಗಳನ್ನು ಪಟ್ಟಿ ಮಾಡಿರಿ. |
| | | ಪ್ರಬಂಧ ಬರೆವಣಿಗೆ ಸಾಮರ್ಥ್ಯ ಹೊಂದುವರು. | ವಿದ್ಯಾರ್ಥಿಗಳು ತಮ್ಮ ಬಸ್ಸು ಪ್ರಯಾಣದ ಅನುಭವವನ್ನು ಕುರಿತು ಪ್ರಬಂಧ ಬರೆಯುವಂತೆ ಶಿಕ್ಷಕರು ಪ್ರೋತ್ಸಾಹಿಸುವುದು. | |
| | ಎರಡನೇ ವಾರ | ಪದಗಳನ್ನು ಬಿಡಿಸಿ ಸಂಧಿ ಹೆಸರನ್ನು ಬರೆಯುವರು. | ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು ಸಂಧಿ ಹೆಸರನ್ನು ಬರೆಯುವಂತೆ ಚಟುವಟಿಕೆ ಮಾಡಿಸುವುದು. | |
| | | ವಿರುದ್ಧಾರ್ಥಕ ಪದಗಳನ್ನು ಬರೆಯುವರು. | ಪದಗಳಿಗೆ ಮಾದರಿಯಲ್ಲಿ ನೀಡಿರುವಂತೆ ವಿರುದ್ದಾರ್ಥಕ ಪದಗಳನ್ನು ಪಟ್ಟಿ ಮಾಡಿಸುವುದು. | |
| | | ವಾಕ್ಯಗಳಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾ ಪದಗಳನ್ನು ಗುರುತಿಸುವರು. | ಮಾದರಿಯಂತೆ ನೀಡಿರುವ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಗುರುತಿಸುವ ಚಟುವಟಿಕೆ ಮಾಡಿಸುವುದು. | |
| | | ವಿಭಕ್ತಿ ಪ್ರತ್ಯಯಗಳನ್ನು ಅರ್ಥೈಸಿಕೊಳ್ಳುವರು ಮತ್ತು ಕಾರಕಾರ್ಥಗಳನ್ನು ಪರಿಚಯ ಮಾಡಿಕೊಳ್ಳುವರು. | ವಾಕ್ಯವನ್ನು ಉದಾಹರಣೆಯಾಗಿ ಬಳಸಿಕೊಂಡು ವಿಭಕ್ತಿ ಪ್ರತ್ಯಯ, ವಿಭಕ್ತಿಗಳು ಮತ್ತು ಕಾರಕಾರ್ಥಗಳನ್ನು ಅರ್ಥೈಸುವುದು ಮತ್ತು ವಿಭಕ್ತಿ ಪ್ರತ್ಯಯಗಳನ್ನು ನಾಮ ಪದಗಳಿಗೆ ಸೇರಿಸಿ ಹೇಳಿಸುವುದು. | ವಿಭಕ್ತಿ ಪ್ರತ್ಯಯಗಳು ಎಂದರೇನು ? ವಿಭಕ್ತಿಗಳ ಪ್ರಕಾರಗಳನ್ನು ಪಟ್ಟಿ ಮಾಡಿರಿ. |

| | | | | |
|---|---|---|---|---|
| | ಮೂರನೇ ವಾರ | **ಪದ್ಯ : ತೊಟ್ಟಿಲು ತೂಗುವ ಹಾಡು**<br>ಜಾನಪದ ಸಂಸ್ಕೃತಿಯ ಬಗ್ಗೆ ಅರಿಯುವುದು. | ಶಿಕ್ಷಕರು, ಜಾನಪದ ಎಂದರೇನು ? ಹಾಗೂ ಜಾನಪದ ಸಂಸ್ಕೃತಿಯ ಬಗ್ಗೆ ವಿವರಿಸಿ ಹೇಳುವರು. | ವಿದ್ಯಾರ್ಥಿಗಳ ಪೂರ್ವಜ್ಞಾನಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುವರು. |
| | | ಅವಿಭಕ್ತ ಕುಟುಂಬದ ಬಗ್ಗೆ ಅರಿಯುವುದು. | ವಿಭಕ್ತ ಮತ್ತು ಅವಿಭಕ್ತ ಕುಟುಂಬದ ನಡುವಿನ ವ್ಯತ್ಯಾಸಗಳನ್ನು ತಿಳಿಸುವುದು. | |
| | | ಪ್ರಕೃತಿಯ ಕೊಡುಗೆಗಳ ಬಗ್ಗೆ ತಿಳಿಯುವರು. | ಪ್ರಕೃತಿ ಎಂದರೇನು? ಪ್ರಕೃತಿಯಿಂದ ನಮಗೆ ದೊರೆತಿರುವ ಅನುಕೂಲಗಳನ್ನು ತಿಳಿಸುವುದು. | |
| | | ಮಾತೃ ವಾತ್ಸಲ್ಯದ ಬಗ್ಗೆ ಅರಿಯುವರು. | ಮಾತೃ ವಾತ್ಸಲ್ಯ ಎಂದರೇನು ? ಎಂಬುದನ್ನು ತಮ್ಮ ಅನುಭವಗಳ ಮೂಲಕ ವಿದ್ಯಾರ್ಥಿಗಳಿಂದ ಹೇಳಿಸುವುದು. | |
| | | ಹಳ್ಳಿ ಮತ್ತು ನಗರ ಜೀವನದ ವ್ಯತ್ಯಾಸವನ್ನು ಅರಿಯುವರು. | ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಜೀವನದ ಅನುಭವ ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳ ಜೀವನದ ಅನುಭವಗಳನ್ನು ವಿದ್ಯಾರ್ಥಿಗಳಿಂದಲೇ ಹೇಳಿಸುವುದು. | |
| | | ಓದಿ ಗ್ರಹಿಸಿದ ಅಂಶಗಳನ್ನು ಆಧರಿಸಿ ನೀಡಿದ ಸೂಚನೆಗಳನ್ನು ಪಾಲಿಸುವರು. | ಕವಯತ್ರಿಯ ಭಾವಚಿತ್ರವನ್ನು ಅಂಟಿಸಿ ಕೆಳಗಿನ ಮಾಹಿತಿಯನ್ನು ಒಳಗೊಂಡ ಚಾರ್ಟ್ ತಯಾರಿಸುವುದು.<br>ಕೃತಿಕಾರರ ಹೆಸರು –<br>ಜನ್ಮ ಸ್ಥಳ –<br>ಕೃತಿಗಳು –<br>ಪಡೆದ ಪ್ರಶಸ್ತಿಗಳು ––––– | ಕವಯತ್ರಿ ವೈದೇಹಿ ಅವರ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ . |
| | | ಪದ್ಯವನ್ನು ಆಲಿಸಿ ನಂತರ ಹಾಡುವರು. | ಶಿಕ್ಷಕರು ಪದ್ಯವನ್ನು ಹಾಡಿ ನಂತರ ವಿದ್ಯಾರ್ಥಿಗಳಿಂದ ಹಾಡಿಸುವರು. | |

| | | | | |
|---|---|---|---|---|
| | | ಪದ್ಯದ ಅರ್ಥವನ್ನು ಹಂತ ಹಂತವಾಗಿ ತಿಳಿಯುವುದು. | ಪದ್ಯದ ಅರ್ಥವನ್ನು ವಿವರಿಸುವರು.<br>ಕವಯತ್ರಿ ಪ್ರಕೃತಿಯನ್ನು ತನ್ನ ಕಂದನಿಗೆ ಹೋಲಿಕೆ ಮಾಡಿ ವರ್ಣಿಸಿರುವುದನ್ನು ತಿಳಿಸುವರು. | |
| | | ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಹೊಂದುವರು. | ಪದ್ಯಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ಚಟುವಟಿಕೆಗಳನ್ನು ಮಾಡಿಸುವರು. | ಕವಯತ್ರಿಯು ತೊಟ್ಟಿಲಲ್ಲಿ ನಗುವ ಹಸುಳೆಯ ಚಂದವನ್ನು ಹೇಗೆ ವರ್ಣಿಸಿದ್ದಾರೆ? |
| | | ಪದ್ಯಕ್ಕೆ ಸಂಬಂಧಿಸಿದಂತೆ ವ್ಯಾಕರಣಾಂಶಗಳನ್ನು ಅರ್ಥೈಸಿಕೊಳ್ಳುವುದು. | ಜೋಲಿ, ತೊಯ್ದು, ಪಕಳೆ, ಕರಿಕಂಗಳ ಮುಂತಾದ ಪದಗಳ ಅರ್ಥ ತಿಳಿಸುವುದು.<br>ಹೊಳೆ, ತಾರೆ, ಕರಿ, ಮುಂತಾದ ಪದದ ವಿವಿಧಾರ್ಥ ತಿಳಿಸುವುದು.<br>ಅನುಕರಣೆ ಮಾಡಿ ಹೇಳುವ ಪದಗಳನ್ನು ಪಟ್ಟಿ ಮಾಡಿಸುವುದು.<br>ಸಾವಧಾನ, ಚೆಂದ, ಮುಂತಾದ ಪದಗಳಿಗೆ ಒಂದೊಂದು ವಾಕ್ಯ ವಿದ್ಯಾರ್ಥಿಗಳಿಂದ ಹೇಳಿಸುವುದು. | ಅವ್ಯಯ ಎಂದರೇನು?<br>ಅನುಕರಣಾವ್ಯಯಗಳನ್ನು ಪಟ್ಟಿ ಮಾಡಿರಿ. |
| | ನಾಲ್ಕನೇ ವಾರ | **ಪೂರಕ ಓದು–**<br>**ನೀರಿನ ಮಹತ್ವ ಮತ್ತು ಮಾಲಿನ್ಯ**<br>ನೀರು ಜೀವನಾಧಾರ ಎಂದು ಅರ್ಥೈಸಿಕೊಳ್ಳುವರು, | ಶಿಕ್ಷಕರು ಗದ್ಯಭಾಗವನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಅನುಸರಿಸಿ ಸ್ಪಷ್ಟವಾಗಿ ಓದಿ ಮಕ್ಕಳಿಗೆ ಅರ್ಥೈಸುವರು.<br>ವಿದ್ಯಾರ್ಥಿಗಳು, ಪ್ರತಿ ಜೀವಿಯ ಜೀವನಾಧಾರ ನೀರು ಎಂಬುದನ್ನು ಕುರಿತು ಚರ್ಚಿಸುವರು.<br>( ವಿಚಾರಗೋಷ್ಠಿಯ ಮೂಲಕ ) | |

# ಅಭ್ಯಾಸ ಹಾಳೆ – 01

## ಬಸ್ಸು ಪ್ರಯಾಣದ ಸುಖ ದುಃಖಗಳು

**ಕೃತಿಕಾರರಿಗೆ ಸಂಬಂಧಿಸಿದ ಮಾಹಿತಿಯನ್ನು ಆಧರಿಸಿ ವಾಕ್ಯರೂಪದಲ್ಲಿ ಕೃತಿಕಾರರನ್ನು ಪರಿಚಯ ಮಾಡಿರಿ.**

<table>
<tr><td>ಕೃತಿಕಾರರ ಹೆಸರು : ವೀರೇಂದ್ರ ಸಿಂಪಿ</td><td>ಕಾಲ: 1938</td></tr>
<tr><td>ಸ್ಥಳ: ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣ</td><td rowspan="2">ಕೃತಿಗಳು: ಕಾಗದದ ಚೂರು, ಭಾವಮೈದುನ, ಸ್ವಚ್ಛಂದ ಮನದ ಸುಳಿದಾಟ, ಪರಿಸರ ಸ್ಪಂದನ</td></tr>
<tr><td>ಪ್ರಶಸ್ತಿಗಳು : ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.</td></tr>
<tr><td colspan="2"></td></tr>
</table>

.

## ಅಭ್ಯಾಸ ಹಾಳೆ – 02

## ಬಸ್ಸು ಪ್ರಯಾಣದ ಸುಖ ದುಃಖಗಳು

**ಈ ಕೆಳಗೆ ನೀಡಲಾಗಿರುವ ಹಂತಗಳನ್ನು ಅನುಸರಿಸಿ, "ನೀವು ಸ್ವತಃ ಅನುಭವಿಸಿದ ಬಸ್ಸು ಪ್ರಯಾಣದ ಸ್ವಾರಸ್ಯಕರ ಸಂಗತಿಗಳನ್ನು ಕುರಿತು ಸರಳ ಪ್ರಬಂಧ ಬರೆಯಿರಿ.**

**ಪೀಠಿಕೆ**________________________________________

**ವಿಷಯ ನಿರೂಪಣೆ**

**ಉಪಸಂಹಾರ**________________________________________

## ಮೌಲ್ಯಮಾಪನ ಹಾಳೆ – 1
## ಬಸ್ಸು ಪ್ರಯಾಣದ ಸುಖ ದುಃಖಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಕ್ರಮಾಕ್ಷರ ಸಹಿತ ಬರೆಯಿರಿ.**

**1. "ಬಸ್ಸು ಪ್ರಯಾಣದ ಸುಖ ದುಃಖಗಳು" ಗದ್ಯ ಪಾಠವು ಈ ಪ್ರಕಾರದ ಸಾಹಿತ್ಯವಾಗಿದೆ.**

ಅ) ಕಥೆ ಆ) ಲಲಿತ ಪ್ರಬಂಧ ಇ) ಅಂಕಣ ಬರೆಹ ಈ) ವಿಮರ್ಶೆ

______________________________

**2. "ಬಸ್ಸು ಪ್ರಯಾಣದ ಸುಖ ದುಃಖಗಳು" ಗದ್ಯ ಪಾಠದ ಲೇಖಕರು.**

ಅ) ವೀರೇಂದ್ರ ಹೆಗ್ಗಡೆ ಆ) ವೀರೇಂದ್ರಸ್ವಾಮಿ ಇ) ವೀರೇಂದ್ರ ಸಿಂಪಿ ಈ) ಸಿಂಪಿ ಲಿಂಗಣ್ಣ

______________________________

**3. ವೀರೇಂದ್ರ ಸಿಂಪಿ ಅವರ ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.**

ಅ) ಭಾವಮೈದುನ ಆ) ಕಾಗದದ ಚೂರು ಇ) ಪರಿಸರ ಸ್ಪಂದನ ಈ) ಸ್ವಚ್ಛಂದ ಮನದ ಸುಳಿದಾಟ

______________________________

**4. 'ಕರ್ನಾಟಕದ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಲೇಖಕರು ಇವರ ಬಳಿ ಕೇಳಿದರು.**

ಅ) ಕೇರಳದ ಮುತ್ತುಗಾರ ಆ) ತಮಿಳುನಾಡಿನ ಮುತ್ತುಗಾರ

ಇ) ಆಂಧ್ರದ ಮುತ್ತುಗಾರ ಈ) ಮಹಾರಾಷ್ಟ್ರದ ಮುತ್ತುಗಾರ

**5. ಲೇಖಕರ ಜೇಬಿನಲ್ಲಿ ಇದ್ದಂತಹ ಹಣ**

ಅ) 50–60 ಆ) 60–70 ಇ) 60–80 ಈ) 50–70

______________________________

**6. ವಿಭಕ್ತಿ ಪ್ರತ್ಯಯಗಳಲ್ಲಿ ಎಷ್ಟು ವಿಧ?**

ಅ) 6 ಆ) 5 ಇ) 7 ಈ) 10

______________________________

**7. ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅರ್ಥವನ್ನುಂಟು ಮಾಡುವ ಪ್ರತ್ಯಯಗಳು**

ಅ) ವಿಭಕ್ತಿ ಸೂಚಕಗಳು ಆ) ವಿಭಕ್ತಿ ಪ್ರತ್ಯಯಗಳು ಇ) ಕಾರಕಾರ್ಥಗಳು ಈ) ನಾಮಪದಗಳು

______________________________

**8. "ಉಪಾಸಕ" ಪದದ ಅರ್ಥ**

ಅ) ಶ್ರೇಷ್ಠ ಆ) ಆರಾಧಕ ಇ) ಜೇಬು ಈ) ತೊಂದರೆ

______________________________

ಆ. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಲೇಖಕರು ಬಸ್ಸಿಗಾಗಿ ಕಾಯುವುದನ್ನು ಯಾವುದಕ್ಕೆ ಸಮಾನ ಎಂದಿದ್ದಾರೆ?

2. ಲೇಖಕರು ಬಸ್ಸನ್ನು ಏರಿದಾಗ ಯಾವ ರೀತಿಯ ಆನಂದ ಉಂಟಾಗುವುದೆಂದು ಹೇಳಿದ್ದಾರೆ?

3. ಲೇಖಕರ ಪ್ರಕಾರ ಯಾವುದು ನೀರಸವಾಗುತ್ತದೆ?

4. ಲೇಖಕರು ಸಹಪ್ರಯಾಣಿಕರೊಂದಿಗೆ ಏಕೆ ರೊಚ್ಚಿಗೆದ್ದರು?

ಇ) ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿರಿ

1. " ಈಗ ಯಾರೂ ಬಸ್ಸನ್ನು ಹತ್ತಬೇಡಿ"

ಆಯ್ಕೆ:-

ಸಂದರ್ಭ :-

ಸ್ವಾರಸ್ಯ :-

2. " ಅದೊಂದು ದರಿದ್ರ ನಾಡು"

ಆಯ್ಕೆ:-

ಸಂದರ್ಭ :-

ಸ್ವಾರಸ್ಯ :-

ಈ) ಕೆಳಗಿನ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.

| 1. ರವಿಯು ಹಣ್ಣನ್ನು ತಿಂದನು | | |
|---|---|---|
| :ಕರ್ತೃಪದ : | :ಕರ್ಮಪದ : | :ಕ್ರಿಯಾಪದ: |
| | | |
| 2. ಗೀತಾ ಶಾಸ್ತ್ರೀಯ ನೃತ್ಯವನ್ನು ಮಾಡುತ್ತಾಳೆ. | | |
| :ಕರ್ತೃಪದ : | :ಕರ್ಮಪದ : | :ಕ್ರಿಯಾಪದ: |
| | | |
| 3.ಉಮೇರಾ ಚಿತ್ರವನ್ನು ಬರೆಯುತ್ತಿದ್ದಾಳೆ. | | |
| :ಕರ್ತೃಪದ : | :ಕರ್ಮಪದ : | :ಕ್ರಿಯಾಪದ: |
| | | |
| 4. ನಂದನ್ ಉದ್ಯಾನದಲ್ಲಿ ವಿಹರಿಸುತ್ತಿದ್ದಾನೆ. | | |
| :ಕರ್ತೃಪದ : | :ಕರ್ಮಪದ : | :ಕ್ರಿಯಾಪದ: |
| | | |

ಉ) ಕೆಳಗಿನ ವಿಭಕ್ತಿ ಪ್ರತ್ಯಯದ ಕೋಷ್ಟಕವನ್ನು ಉದಾಹರಣೆಗಳಿಂದ ಪೂರ್ಣಗೊಳಿಸಿರಿ:

| ವಿಭಕ್ತಿಗಳು | ನಾಮಪದ | ವಿಭಕ್ತಿ ಪ್ರತ್ಯಯ | ಕಾರಕಾರ್ಥ |
|---|---|---|---|
| ಪ್ರಥಮ | ಕೃಷ್ಣನು | | |
| ದ್ವಿತೀಯಾ | | | ಕರ್ಮಕಾರಕ |
| ತೃತೀಯಾ | | | |
| ಚತುರ್ಥಿ | | ಕೆ, ಗೆ, ಇಕೆ | |
| ಪಂಚಮಿ | | | |
| ಷಷ್ಠಿ | | | |
| ಸಪ್ತಮೀ | ಮನದಲ್ಲಿ | | |

| **ವಿಭಕ್ತಿಗಳು** | **ನಾಮಪದ** | **ವಿಭಕ್ತಿ ಪ್ರತ್ಯಯ** | **ಕಾರಕಾರ್ಥ** |
|---|---|---|---|
| | ನಾಣಿಯು | | |
| | ಜ್ಯೋತಿಯಿಂದ | | ಕರಣಕಾರಕ |
| | ಮರದದೆಸೆಯಿಂದ | | |
| | ನಾಡಿಗೆ | | |
| | ರಾಜನನ್ನು | | |
| | ರಾಮನಲ್ಲಿ | ಅಲ್ಲಿ | |
| | ಆನಂದನ | | |

**ಪರ್ಯಾಯ ಶೈಕ್ಷಣಿಕ ಯೋಜನೆ 2021–22**

**ವಿಷಯ: ದ್ವಿತೀಯ ಭಾಷೆ ಕನ್ನಡ**

**ತರಗತಿ: 9** **ನೀರಿನ ಮಹತ್ವ ಮತ್ತು ಮಾಲಿನ್ಯ** **ಮಾಹೆ: ನವೆಂಬರ್**

**ಮೌಲ್ಯ ಮಾಪನ ಹಾಳೆ – 2**

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

1. ಎಲ್ಲಾ ಜೀವಿಗಳಿಗೆ ಜೀವನಾಧಾರ ಯಾವುದು ?

2. ಜಗತ್ತಿನ ಎಲ್ಲಾ ನಾಗರೀಕತೆಗಳು ಎಲ್ಲಿ ಪ್ರವರ್ಧಮಾನಕ್ಕೆ ಬಂದವು?

3. ಇಂದು ನೈಸರ್ಗಿಕ ನೀರಿನ ಮೂಲಗಳು ಯಾವ ರೀತಿ ಮಾರ್ಪಾಟಾಗಿವೆ?

4. ನೀರಿನ ಉಳಿತಾಯದ ಮಹತ್ವವನು ಕುರಿತು ಬರೆಯಿರಿ?

**ಆ) ಜಲಮಾಲಿನ್ಯ ಮತ್ತು ಅದರ ದುಷ್ಪರಿಣಾಮಗಳು ವಿಷಯವನ್ನು ಕುರಿತು ಸರಳ ಪ್ರಬಂಧವನ್ನು ಬರೆಯಿರಿ .**

**ಪರ್ಯಾಯ ಶೈಕ್ಷಣಿಕ ಯೋಜನೆ 2021–22**

**ವಿಷಯ: ದ್ವಿತೀಯ ಭಾಷೆ ಕನ್ನಡ**

**ತರಗತಿ: 9 ತೊಟ್ಟಿಲು ತೂಗುವ ಹಾಡು ಮಾಹೆ: ನವೆಂಬರ್**

**ಅಭ್ಯಾಸ ಹಾಳೆ – 3**

**ಅ. ಕವಯಿತ್ರಿಗೆ ಸಂಬಂಧಿಸಿದ ಮಾಹಿತಿಯನ್ನು ಆಧರಿಸಿ ವಾಕ್ಯರೂಪದಲ್ಲಿ ಕವಯಿತ್ರಿಯನ್ನು ಪರಿಚಯ ಮಾಡಿರಿ.**

| | |
|---|---|
| ಕವಯಿತ್ರಿ ಹೆಸರು : ಜಾನಕಿ ಶ್ರೀನಿವಾಸ ಮೂರ್ತಿ | ಕಾವ್ಯನಾಮ : ವೈದೇಹಿ |
| ಸ್ಥಳ : ಉಡುಪಿ ಜಿಲ್ಲೆಯ ಕುಂದಾಪುರ | ಕೃತಿಗಳು : ಬಿಂದು ಬಿಂದಿಗೆ, ಪಾರಿಜಾತ, ಅಸ್ಪೃಶ್ಯರು, ಅಮ್ಮಚ್ಚಿ ಎಂಬ ನೆನಪು, ಮಲ್ಲಿನಾಥನ ಧ್ಯಾನ, ಮೇಜು ಮತ್ತು ಬಡಗಿ |
| ಕಾಲ : 1945 | |
| ಪ್ರಶಸ್ತಿಗಳು: ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ , ಎಂ ಕೆ ಇಂದಿರಾ ಪ್ರಶಸ್ತಿ , ಅನುಪಮಾ ಪ್ರಶಸ್ತಿ, ಕರ್ನಾಟಕ ಸರ್ಕಾರದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ | |
| | |

**ಆ. ಕವಯಿತ್ರಿ ಬರೆದಿರುವ ಕೃತಿಗಳನ್ನು ಪಟ್ಟಿ ಮಾಡಿ .**

| |
|---|
| |

## ತೊಟ್ಟಿಲು ತೂಗುವ ಹಾಡು

### ಅಭ್ಯಾಸ ಹಾಳೆ – 4

ಅ. ಪದ್ಯದ ಸಾಲನ್ನು ಹೊಂದಿಸಿ ಬರೆಯಿರಿ.

| | | |
|---|---|---|
| 1. ಹರಿವ | ಗಾಳಿ | ____________ |
| 2. ಬೀಸುವ | ಹೊಳೆ | ____________ |
| 3. ತಿರುಗುವ | ತಾರೆ | ____________ |
| 4. ಮಿನುಗುವ | ಬುಗುರಿ | ____________ |
| 5. ತೂಗುವ | ಲಾಲಿ | ____________ |
| 6. ಹಾಡುವ | ದೋಣಿ | ____________ |
| 7. ತೇಲುವ | ತೊಟ್ಟಿಲು | ____________ |

ಆ. ಕೆಳಗಿನ ಪದಗಳಿಗೆ ವಿವಿಧಾರ್ಥಕಗಳನ್ನು ಬರೆಯಿರಿ.

1. ಹೊಳೆ– ____________ ____________
2. ತಾರೆ – ____________ ____________
3. ಕರಿ – ____________ ____________

ಇ. ಪದ್ಯದಲ್ಲಿ ಬಂದಿರುವ ಅನುಕರಣಾವ್ಯಯ ಪದಗಳನ್ನು ಪಟ್ಟಿ ಮಾಡಿ.
ಉದಾಹರಣೆಗೆ : ಳುಳುಳು

ಈ. ಈ ಪದಗಳನ್ನು ನಿಮ್ಮ ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ.

1. ಸಾವಧಾನ :
____________
____________
2. ನವಿಲು:
____________
____________
3. ಮನೆ :
____________
____________
4. ಗಾಳಿ :
____________
____________

## ಮೌಲ್ಯಮಾಪನದ ಹಾಳೆ –3

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ತೊಟ್ಟಿಲು ತೂಗುವ ಹಾಡು ಕವಿತೆಯ ಆಕರ ಕೃತಿ ಯಾವುದು?

______________________________

______________________________

2. ಕವಯಿತ್ರಿಗೆ ಪ್ರಕೃತಿಗಿಂತಲೂ ಚೆಂದವಾಗಿ ಕಂಡದ್ದು ಯಾವುದು?

______________________________

______________________________

3. ಹೊಳೆ, ಅಲೆ ಹಾಗೂ ಗಾಳಿ ಹೇಗೆ ನಾದಗೈಯುತ್ತವೆ?

______________________________

______________________________

4. ಜೋಲಿಯೊಳಗಿನ ಹಸುಳೆ ಹೇಗೆ ನಗುತ್ತದೆ?

______________________________

______________________________

5. ಗಿರಿಯ ನವಿಲಿನ ಚೆಂದವೇನು?

______________________________

______________________________

6. ಕರಿಕಂಗಳಲ್ಲಿ ಎಂತಹ ಚೆಂದವಿದೆ?

______________________________

______________________________

7. ವೈದೇಹಿಯವರ ನಿಜವಾದ ಹೆಸರೇನು?

______________________________

______________________________

ಆ. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:

1. "ತೊಟ್ಟಿಲು ತೂಗುವ ಹಾಡು" ಕವಿತೆಯಲ್ಲಿ ಕವಯಿತ್ರಿಗೆ ಚೆಂದವಾಗಿ ಕಂಡ ಪ್ರಕೃತಿಯ ದೃಶ್ಯಗಳಾವುವು?

2. "ತೊಟ್ಟಿಲು ತೂಗುವ ಹಾಡು" ಕವಿತೆಯಲ್ಲಿ ಕವಯಿತ್ರಿ ಜಗವನ್ನೆಲ್ಲಾ ತೂಗಿರುವ ಪರಿ ಹೇಗೆ?

3. "ತೊಟ್ಟಿಲು ತೂಗುವ ಹಾಡು" ಕವಿತೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಇ. ಈ ಕೆಳಗಿನ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ .

1. ಎಲ್ಲಕ್ಕಿಂತ ನಮ್ಮ ಮನೆಯ ತೊಟ್ಟಿಲಿನ ತೊದಲು ಚೆಂದ

2. ಮಗುವ ತೂಗಿರೋ ಆಹಾ ಜಗವ ತೂಗಿರೋ